SC No.43-2018

ಪಿಡಬ್ಲ್ಯೂ-3

ದಿಃ 03-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಸಾಕ್ಷಿಗೆ ಈಗ ಮು.ಮಾ.98 ನ್ನು ತೋರಿಸಿ ಸದರಿ ಹಾರಕ್ಕೆ ಸಂಬಂಧಿಸಿ ನಿ.ಪಿ.19 ಬಿಲ್ಲನ್ನು ಮುಖ್ಯ ವಿಚಾರಣೆಯಲ್ಲಿ ನಿಶಾನೆಗೊಳಪಡಿಸಲಾಗಿದ್ದು, ಸದರಿ ನಿ.ಪಿ.19 ರಲ್ಲಿ 104 ಕರಿಮಣಿ ಇರುವ ಸರ ಎಂದು ಬರೆಯಲಾಗಿದ್ದು, ಮು.ಮಾ.98 ರಲ್ಲಿ ಯಾವುದೇ ಕರಿಮಣಿಗಳು ಇರುವುದು ಕಂಡುಬರುತ್ತಿಲ್ಲ ಎಂದರೆ ಸರಿ. ಮು.ಮಾ.98 ಪ್ಯಾನ್ಸಿ ಸರ ಎಂದರೆ ಸರಿ. ಈಗ ಸಾಕ್ಷಿಗೆ ನಿ.ಡಿ.5 ದಾಖಲೆಯನ್ನು ತೋರಿಸಿ ಸದರಿ ಬಿಲ್ಲಿನಲ್ಲಿ ಮು.ಮಾ.98 ಖರೀದಿಸಿದ ಕುರಿತು ಕಂಡುಬರುತ್ತಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದು, ನಾವು ನೀಡುವಾಗ ಸದರಿ ಸರದಲ್ಲಿ ಕರಿಮಣಿಗಳು ಇದ್ದು, ನಂತರ ಅದನ್ನು ಬದಲಾಯಿಸಿರಬಹುದು ಎಂದು ನುಡಿದಿರುತ್ತಾರೆ. ಬಂಗಾರವನ್ನು ಬದಲಾಯಿಸಿದಾಗ ಅಂಗಡಿಯವರು ಅದಕ್ಕೆ ಹೊಸದಾಗಿ ಬಿಲ್ಲನ್ನು ನೀಡುವುದಿಲ್ಲ ಎಂದರೆ ಸರಿ. ನಿ.ಡಿ.5 ರ ಪ್ರಕಾರ 35.460 ಗ್ರಾಂ ನ ಬಂಗಾರದ ಸರ ಮಾಡಿಸಲು ನಿವ್ವಳ ತೂಕ ಮಾಡಿಸಲಾಗಿದ್ದು, ಆ ನಂತರ ಅದಕ್ಕೆ ರೂಪಾಯಿ 1,12,992-00 ಹಣ ನೀಡಿ ಖರೀದಿಸಿರುವುದು ಕಂಡುಬರುತ್ತಿದೆ ಎಂದರೆ ಸರಿ. ಮು.ಮಾ.98 ನ್ನು ನಾವು ಖರೀದಿಸಿ ನೀಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಮು.ಮಾ.96 ನ್ನು ತೋರಿಸಿ ಸದರಿ ಸರವು ಕರಿಮಣಿಗಳನ್ನು ಹೊಂದಿರುವ ಬಂಗಾರದ ಮಾಂಗಲ್ಯ ಸರ ಎಂದರೆ ಸರಿ. ಸದರಿ ಮು.ಮಾ.96 ಕ್ಕೆ ಸಂಬಂಧಿಸಿ ನಾವು ಯಾವುದೇ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಿಶಾನೆಗೊಳಪಡಿಸಿದ ಎಲ್ಲಾ ಬಿಲ್ಲುಗಳನ್ನು ಪರಿಶೀಲಿಸಿ ನೋಡಿ ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈಗ ನಿ.ಡಿ.2 ನ್ನು ತೋರಿಸಿ ಅದರಲ್ಲಿ 1 ರಿಂದ 3 ನೇ ವಸ್ತುಗಳು ಸೇರಿ ಮು.ಮಾ.96 ಖರೀದಿಸಿದ ಕುರಿತಾಗಿ ಇರುವ ಬಿಲ್ಲು ಎಂದು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಸದರಿ ಬಿಲ್ಲಿನಲ್ಲಿ ನಮೂದು ಇರುತ್ತದೆ ಎಂದು ನುಡಿದಿರುತ್ತಾರೆ. ಅಲ್ಲದೇ ಸಾಕ್ಷಿಯು ಮುಂದುವರೆದು ನಿ.ಡಿ.2 ಬಿಲ್ಲು 2016 ರ ಬಿಲ್ಲು ಎಂದು ನುಡಿದಿರುತ್ತಾರೆ. ಸದರಿ ಮು.ಮಾ.96 ರಲ್ಲಿ ತಾಳಿ ಹಾಗೂ ಗುಂಡು ಅಲ್ಲದೇ ತಂತಿಯನ್ನು ಸೇರಿ ಒಟ್ಟು 43.150 ಗ್ರಾಂ ಆಗುತ್ತದೆ ಎಂದರೆ ಇರಬಹುದು.

ಸಾಕ್ಷಿಗೆ ಈಗ ಮು.ಮಾ.64 ನ್ನು ತೋರಿಸಲಾಗಿದ್ದು, ಸದರಿ ಆಭರಣ ಹಳೇ ಮಾಡಲಿನ ನೆಕ್ಲೇಸ್ ಎಂದರೆ ಸರಿ. ಸದರಿ ಮು.ಮಾ.64 ಕ್ಕೆ ಸಂಬಂಧಿಸಿ ನಾವು ಯಾವುದೇ ಬಿಲ್ಲನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಿ.ಪಿ.20 ನ್ನು ತೋರಿಸಿ ಬಿಲ್ಲು ಇದೆ ಎಂದು ನುಡಿದಿರುತ್ತಾರೆ. ಪೋಲೀಸರು ಪಿಎಫ್ ನಂ.133/2017 ರಲ್ಲಿ ಮು.ಮಾ.64 ರ ತೂಕ 68.700 ಗ್ರಾಂ ಎಂದು ತೋರಿಸಿದ್ದಾರೆ ಎಂದರೆ ಸರಿ. ನಿ.ಪಿ.20 ಬಿಲ್ಲಿನಲ್ಲಿ ಮಾಡಿಸಲಾದ ನೆಕ್ಲೇಸ್ ಮತ್ತು ವಾಲಿ ಸೇರಿಸಿ ಅದರ ತೂಕ 25.870 ಗ್ರಾಂ ಎಂದು ತೋರಿಸಲಾಗಿದೆ ಎಂದರೆ ಸರಿ. ಆ ಕಾರಣ ನಿ.ಪಿ.20 ಬಿಲ್ಲು ಮು.ಮಾ.64 ಕ್ಕೆ ಸಂಬಂಧಿಸಿದ ಬಿಲ್ಲು ಅಲ್ಲ ಎಂದರೆ ಸಾಕ್ಷಿಯು ನಾವು ಸದರಿ ನೆಕ್ಲೇಸನ್ನು ನೀಡಿದ್ದು, ನಂತರ ಆರೋಪಿತರು ಅದನ್ನು ಬದಲಾಯಿಸಿದ್ದಾರೆ ಎಂದು ನುಡಿದಿರುತ್ತಾರೆ. ಮು.ಮಾ.64 ನ್ನು 3 ನೇ

ಆರೋಪಿಯ ಅಣ್ಣ ನಂಜಪ್ಪ ಎನ್ನುವವರು ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ಹುದ್ದೆ ದೊರಕಿದ ಕಾರಣ ಆತನ ತಂಗಿಗೆ ನೀಡಿದ ಉಡುಗೊರೆ ಎಂದರೆ ನನಗೆ ತಿಳಿದಿರುವುದಿಲ್ಲ.

ಸಾಕ್ಷಿಗೆ ಈಗ ಮು.ಮಾ.65 ಮತ್ತು 72 ನ್ನು ತೋರಿಸಲಾಗಿದ್ದು, ಅದರಲ್ಲಿ ಮು.ಮಾ.65 ಚಿಕ್ಕ ಮಕ್ಕಳ ಕೈಗೆ ಹಾಕುವ ಬ್ರಾಸ್ ಲೈಟ್ ಎಂದು ಹಾಗೂ ಮು.ಮಾ.72 ಮಕ್ಕಳ ಕೊರಳಿಗೆ ಹಾಕುವ ಚೈನು ಎಂದರೆ ಸರಿ. ಸದರಿ ಎರಡು ವಸ್ತುಗಳನ್ನು 1 ನೇ ಆರೋಪಿಯ ತಮ್ಮ ರುದ್ರೇಶ ಎನ್ನುವವನು ಅಮೇರಿಕಾದಲ್ಲಿ ಎಂಜಿನಿಯರ್ ಆಗಿದ್ದು, ಆತ 1 ನೇ ಆರೋಪಿಗೆ ಮಗು ಜನಿಸಿದಾಗ ಸದರಿ ಮಗುವಿಗೆ ನೀಡಿದ ಉಡುಗೊರೆ ಎಂದರೆ ಸಾಕ್ಷಿಯು ಅವುಗಳನ್ನು ನಾವು ನೀಡಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಆಭರಣಗಳನ್ನು ನಾವು ನೀಡಿದ್ದೇವೆ ಎಂದು ತೋರಿಸಲು ನಾವು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅವುಗಳನ್ನು ಹಾಕಿದ ಕುರಿತು ಪೋಟೋ ನಾವು ತನಿಖಾಧಿಕಾರಿಗೆ ನೀಡಿದ್ದು, ಅದನ್ನು ಹಾಜರುಪಡಿಸಲಾಗಿರುವುದಿಲ್ಲ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ನಿ.ಪಿ.24 ಬಿಲ್ಲನ್ನು ಸಾಕ್ಷಿಗೆ ತೋರಿಸಿ ಸದರಿ ಬಿಲ್ಲಿನಲ್ಲಿ ತೋರಿಸಲಾಗಿರುವ ಆಭರಣಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿಲ್ಲ ಎಂದರೆ ಸಾಕ್ಷಿಯು ನಾವು ಅವುಗಳನ್ನು ಆರೋಪಿತರಿಗೆ ನೀಡಿದ್ದು, ನಂತರ ಅವರು ಏನು ಮಾಡಿಕೊಂಡಿದ್ದಾರೆ ಎಂದು ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ನಿ.ಪಿ.24 ರಲ್ಲಿ ಹೇಳಲಾಗಿರುವ ಆಭರಣಗಳ ತೂಕದ ಆಭರಣಗಳು ಈಗ ನ್ಯಾಯಾಲಯದಲ್ಲಿ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಕೈಚೈನು ಹಾಕಿದ ಕುರಿತು ನಿ.ಪಿ.30(ಎ) ಪೋಟೋ ಹಾಜರುಪಡಿಸಲಾಗಿದೆ ಎಂದು ನುಡಿದಿರುತ್ತಾರೆ. ಸದರಿ ನಿ.ಪಿ.30(ಎ) ಪೋಟೋ ಆರತಕ್ಷತೆ ಸಮಯದ ಪೋಟೋ ಆಗಿದ್ದು, ಆ ಸಮಯದಲ್ಲಿ ಉಡುಗೊರೆಯಾಗಿ ನೀಡಿದ ಆಭರಣಗಳು ಎಂದರೆ ಸರಿಯಲ್ಲ. ನಿ.ಪಿ.24 ಬಿಲ್ಲಿನಲ್ಲಿ ಇರುವ ಆಭರಣಕ್ಕೂ ನಿ.ಪಿ.30(ಎ) ದಲ್ಲಿ ಹೇಳುತ್ತಿರುವ ಆಭರಣಕ್ಕೂ ವ್ಯತ್ಯಾಸವಿದ್ದರೂ ಕೂಡ ಅದೇ ಆಭರಣ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಮು.ಮಾ.75 ನ್ನು ತೋರಿಸಲಾಗಿದ್ದು, ಅದನ್ನು 1 ನೇ ಆರೋಪಿಯ ಮಗುವಿನ ಹುಟ್ಟುಹಬ್ಬದ ಸಮಯದಂದು 1 ನೇ ಆರೋಪಿಯ ಸಹೋದರಿಯರು ನೀಡಿದ ಉಡುಗೊರೆಗಳು ಎಂದರೆ ಸಾಕ್ಷಿಯು ಅವುಗಳನ್ನು ನಾವು ಹಾಕಿರುವುದಾಗಿ ನುಡಿದಿರುತ್ತಾರೆ. ಪೋಲೀಸರು ದಾಖಲಿಸಿದ ಪಿಎಪ್ ನಂ.133/2017 ರ ವಸ್ತು ಸಂಖ್ಯೆ 80, 81 ಮತ್ತು 82 ಕ್ಕೆ ಸಂಬಂಧಿಸಿದ ವಸ್ತುಗಳ ಬಿಲ್ಲುಗಳನ್ನು ದಾಖಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೆಲವೊಂದು ಬಿಲ್ಲುಗಳನ್ನು ಹಾಕಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ವಸ್ತುಗಳನ್ನು 1 ನೇ ಆರೋಪಿಯ ಸಹೋದರಿಯರು ನನ್ನ ತಂಗಿಗೆ ಮದುವೆ ಸಮಯದಲ್ಲಿ ನೀಡಿದ ಉಡುಗೊರೆಗಳು ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಮು.ಮಾ.73 ನ್ನು ತೋರಿಸಲಾಗಿದ್ದು, ಅದರ ತೂಕ 57.690 ಮಿಲಿ ಗ್ರಾಂ ನ ಆಭರಣಕ್ಕೆ ಸಂಬಂಧಿಸಿ ಯಾವುದೇ ಬಿಲ್ಲುಗಳನ್ನು ದಾಖಲಿಸಲಾಗಿಲ್ಲ ಎಂದರೆ ಸಾಕ್ಷಿಯು ನಿ.ಪಿ.21 ನ್ನು ತೋರಿಸಿ ದಾಖಲಿಸಲಾಗಿದೆ ಎಂದು ನುಡಿದಿರುತ್ತಾರೆ. ಮುಂದುವರೆದು ಆರೋಪಿತರು ತೂಕ ಬದಲಾವಣೆ ಮಾಡಿಕೊಂಡಿರಬಹುದು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ನಿ.ಡಿ.6 ಬಿಲ್ಲನ್ನು ತೋರಿಸಿ ಸದರಿ

ಆಭರಣಕ್ಕೆ ಸಂಬಂಧಿಸಿದ 57.270 ಗ್ರಾಂ ತೂಕದ ಚಿನ್ನದ ಬಳೆಗಳ ಕುರಿತಾದ ಬಿಲ್ಲು ಎಂದರೆ ಸಾಕ್ಷಿಯು ನಾವು ನೀಡಿದ ಆಭರಣವನ್ನು ಮುರಿಸಿ ಆರೋಪಿತರು ಮಾಡಿಸಿದ್ದಾರೆ ಎಂದು ನುಡಿದಿರುತ್ತಾರೆ. ನಿ.ಡಿ.6 ನೇರವಾಗಿ ಕುಮಾರ ಗೋಲ್ಡ್ ಡೈಮಂಡ್ಸ್ ನಲ್ಲಿ ಖರೀದಿ ಮಾಡಿದ ಆಭರಣ ಎಂದು ತೋರಿಸುತ್ತದೆ ಎಂದರೆ ಇರಬಹುದು.

ಆರೋಪಿತರ ಮನೆಯಿಂದ ಪೋಲೀಸರು ವಶಪಡಿಸಿಕೊಂಡು ಬಂದ ಎಲ್ಲಾ ಬೆಳ್ಳಿಯ ಆಭರಣಗಳು ಆರೋಪಿತರಿಗೆ ಸಂಬಂಧಿಸಿದ ಆಭರಣಗಳು ಎಂದರೆ ಸರಿಯಲ್ಲ. ಸದರಿ ಬೆಳ್ಳಿಯ ವಸ್ತುಗಳು ಮದುವೆಯ ಸಂದರ್ಭದಲ್ಲಿ ಮತ್ತು ಮಗು ಹುಟ್ಟಿದಾಗ ಆಹ್ವಾನಿತರು ನೀಡಿದಂತಹ ಉಡುಗೊರೆಗಳು ಎಂದರೆ ಸರಿಯಲ್ಲ.

ಅಲ್ಲದೇ ಮುಖ್ಯ ವಿಚಾರಣೆಯಲ್ಲಿ ಹೇಳಿದ ಬೈಕಿನ ಕುರಿತಾಗಿ ಆರೋಪಿತರೇ ರೂ.50,476-00 ಹಣವನ್ನು ನೀಡಿ ಖರೀದಿಸಿದ ಬೈಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ಬಿಲ್ಲನ್ನು ತೋರಿಸಿ ಸದರಿ ಬಿಲ್ ಮೂಲಕ ಆ ಬೈಕನ್ನು ಖರೀದಿಸಲಾಗಿದೆ ಎಂದು ಕೇಳಲಾಗಿದ್ದು, ಸಾಕ್ಷಿಯು ಅದಕ್ಕೆ ಇರಬಹುದು, ಆದರೆ ನಾವೇ ಹಣ ನೀಡಿದ್ದೇವೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಸದರಿ ಬಿಲ್ಲನ್ನು ನೋಡಿ ಇರಬಹುದು ಎಂದು ನುಡಿದಿರುವ ಕಾರಣ ಸದರಿ ಬಿಲ್ಲನ್ನು ನಿ.ಡಿ.11 ಎಂದು ಗುರುತಿಸಲಾಯಿತು. ಪೋಲೀಸರು ಆರೋಪಿತರ ಮನೆಯಿಂದ ವಶಪಡಿಸಿಕೊಂಡಿರುವ ಬಂಗಾರದ ಚಿಕ್ಕ ಚಿಕ್ಕ ವಸ್ತುಗಳ ಕುರಿತಾಗಿಯೂ ಕೂಡ ಆರೋಪಿತರ ಬಳಿ ಬಿಲ್ಲುಗಳು ಇವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

ಶವ ತನಿಖೆಯ ಸಮಯದಲ್ಲಿ ಪಿಎಫ್ ನಂ.109/2017 ರಲ್ಲಿ ತೋರಿಸಿರುವ ಮು.ಮಾ.102, 103 ಹಾಗೂ 104 ನ್ನು ಆರೋಪಿತರೇ ಮೃತಳಿಗೆ ನೀಡಿರುವ ಆಭರಣಗಳು ಎಂದರೆ ಸರಿಯಲ್ಲ.

ಆರೋಪಿತರು ನನ್ನ ತಂಗಿ ಮದುವೆಯಾದ ಒಂದೂವರೆ ವರ್ಷದ ಬಳಿಕ 5 ತೊಲ ಬಂಗಾರ ತರುವಂತೆ ಆಕೆಗೆ ಒತ್ತಾಯ ಮಾಡಿರುತ್ತಾರೆ. ಅದರ ನಂತರ ಯಾವ ದಿನದಂದು ಪುನಃ ಬೇಡಿಕೆ ಇಟ್ಟಿದ್ದರು ಎಂದು ನನಗೆ ನಿರ್ಧಿಷ್ಟವಾಗಿ ಈಗ ಹೇಳಲು ಸಾಧ್ಯವಿರುವುದಿಲ್ಲ. ನಾನು ದೂರನ್ನು ಸಲ್ಲಿಸುವಾಗ ಇಂತಹ ಇಂತಹ ದಿನದಂದು ಎಷ್ಟು ಎಷ್ಟು ವರದಕ್ಷಿಣೆ ಬೇಡಿಕೆ ಇಟ್ಟಿದ್ದರು ಎಂದು ಬರೆಯಿಸಿರುತ್ತೇನೆ. ಸದರಿ ವಿಷಯವನ್ನು ನಾನು ಕೇಳಿ ಬರೆಯಿಸಿದ ದೂರಿನಲ್ಲಿ ಬರೆಯಲಾಗಿದೆಯೇ ಇಲ್ಲವೇ ಎನ್ನುವುದನ್ನು ನಾನು ಓದಿ ತಿಳಿದುಕೊಂಡು ನಂತರ ಸಹಿ ಮಾಡಿರುತ್ತೇನೆ.

ನಮ್ಮ ಊರಿನಿಂದ ಗಾಂಧಿನಗರ ಪೂರ್ವ ದಿಕ್ಕಿನಲ್ಲಿ ಇದ್ದು, 8 ರಿಂದ 9 ಕಿಮೀ ಅಂತರವಿರುತ್ತದೆ. ಅಲ್ಲಿಂದ ಪೂರ್ವಕ್ಕೆ ನಾನು ಮದುವೆಯಾದ ಸ್ಥಳ ಚಿಕ್ಕವ್ವನ ನಾಗತಿಹಳ್ಳಿಗೆ ಗಾಂಧಿನಗರದಿಂದ 3 ರಿಂದ 4 ಕಿಮೀ ಆಗುತ್ತದೆ ಎಂದರೆ ಸರಿ. ನನ್ನ ತಂಗಿ ಕುಸುಮ ತವರುಮನೆಗೆ ಬಂದಾಗ ಅವಳನ್ನು ಬಿಡಲು ಹೋಗುವಾಗ ಮೊದಲು ಆಕೆಯನ್ನು ಗಾಂಧಿನಗರಕ್ಕೆ ಬಿಟ್ಟು ನಂತರ ಚಿಕ್ಕವ್ವನ ನಾಗತಿಹಳ್ಳಿಗೆ ಹೋಗುತ್ತಿದ್ದೆ ಎಂದರೆ ಸಾಕ್ಷಿಯು ಕೆಲಸವಿದ್ದಾಗ ಮಾತ್ರ ಆಕೆಯನ್ನು ಗಾಂಧಿನಗರಕ್ಕೆ ಬಿಟ್ಟು ಚಿಕ್ಕವ್ವನ ನಾಗತಿಹಳ್ಳಿಗೆ ಹೋಗುತ್ತಿದ್ದೆ ಎಂದು ನುಡಿದಿರುತ್ತಾರೆ. ನಮ್ಮ ಊರಿನಿಂದ ಗಾಂಧಿನಗರಕ್ಕೆ 4 ರಿಂದ 5 ಕಿಮೀ ಮಾತ್ರ ಆಗುತ್ತದೆ ಎಂದರೆ ಸಾಕ್ಷಿಯು ಹೆಚ್ಚಿಗೆ ಇದೆ ಎಂದು ನುಡಿದಿರುತ್ತಾರೆ.

ನನ್ನ ತಂಗಿ ಕುಸುಮ ತೀರಿಕೊಳ್ಳುವ ಎರಡು ದಿನದ ಮೊದಲು ನಮ್ಮ ಮನೆಯಿಂದ ಆಕೆಯ ಗಂಡನ ಮನೆಗೆ ಹೋಗಿದ್ದಳು ಎಂದರೆ ಸರಿ. ಆ ಸಮಯದಲ್ಲಿ ಆಕೆಯನ್ನು ನನ್ನ ಚಿಕ್ಕಪ್ಪ ಚಂದ್ರಶೇಖರಪ್ಪ ಕರೆದುಕೊಂಡು ಹೋಗಿ ಬಿಟ್ಟಿದ್ದರು ಎಂದರೆ ಸಾಕ್ಷಿಯು ನಾನು ಅವರ ಜೊತೆ ಹೋಗಿದ್ದೆ ಎಂದು ನುಡಿದಿರುತ್ತಾರೆ. ನಾನು ಕೂಡ ಅವರ ಜೊತೆ ಆಗ ಹೋಗಿದ್ದೆ ಎಂದು ಈಗ ನಾನು ಸೃಷ್ಟಿಸಿಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಬಿಡಲು ಹೋದಾಗ ಆರೋಪಿತರು ನನ್ನ ಚಿಕ್ಕಪ್ಪ ಚಂದ್ರಶೇಖರಪ್ಪನ ಬಳಿ ನನ್ನ ತಂಗಿ ಕುಸುಮ ತವರುಮನೆಗೆ ಹೋಗಿ ಐದು ದಿನಗಳು ಕೂಡ ಆಗಿಲ್ಲ, ಏಕಾ ಏಕಿ ಯಾಕೆ ಕರೆದುಕೊಂಡು ಬಂದಿರಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಚಿಕ್ಕಪ್ಪ ಅವರ ಬಳಿ ಕುಸುಮ ತನ್ನ ತವರುಮನೆಯ ಆಸ್ತಿಯ ಕುರಿತು ಪಾಲು ಕೇಳಿದ್ದು, ಆ ಕಾರಣ ಆಕೆ ಮತ್ತು ಆಕೆಯ ಸಹೋದರರ ನಡುವೆ ಜಗಳವಾಗಿದ್ದು, ಆ ಕಾರಣದಿಂದಲೇ ಆಕೆಯನ್ನು ಬೇಗ ವಾಪಾಸು ಕರೆದುಕೊಂಡು ಬಂದೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ.

ನನ್ನ ತಂದೆಯ ಅಕ್ಕ ಪಾಲಾಕ್ಷಮ್ಮ ನಮ್ಮ ಮನೆಯ ಆಸ್ತಿಯ ಪಾಲು ಕೋರಿ ದಾವಣಗೆರೆಯ 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವಾ 42/2007 ರಂತೆ ದಾವಾ ದಾಖಲಿಸಿದ್ದಳು ಎಂದರೆ ಸರಿ. ನಂತರ ಸದರಿ ಪ್ರಕರಣದಲ್ಲಿ ಪ್ರಿಲಿಮಿನರಿ ಡಿಕ್ರಿಯಾಗಿ ನಂತರ ಆರ್ ಎ ಪ್ರಕರಣ 28/2017 ದಾಖಲಾಗಿ ಇದೆ ನ್ಯಾಯಾಲಯಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಂದೆಗೆ 1/6 ಭಾಗ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ 2020 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂಗಿಯು ಕೂಡ ಯಾವ ರೀತಿಯಾಗಿ ಪಾಲಾಕ್ಷಮ್ಮ ಆಸ್ತಿಯಲ್ಲಿ ಪಾಲು ಕೇಳಿದ್ದಳೋ ಅದೇ ರೀತಿ ನಮ್ಮ ಬಳಿ ಕೂಡ ಪಾಲಿಗಾಗಿ ಕೋರಿಕೊಂಡಿದ್ದಳು ಎಂದರೆ ಸರಿಯಲ್ಲ. ಇದೇ ದ್ವೇಷದಿಂದ ನಾವು ಕುಸುಮಾಳಿಗೆ ಹೊಡೆ ಬಡೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನನ್ನ ಚಿಕ್ಕಪ್ಪ ಕುಸುಮ ತವರು ಮನೆಯಲ್ಲಿ ಇದ್ದರೆ ನಾವು ಏನಾದರೂ ಮಾಡಿಬಿಡುತ್ತೇವೆ ಎಂದು ಭಾವಿಸಿ ಆಕೆಯನ್ನು ಆಕೆಯ ಗಂಡನ ಮನೆಗೆ ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ನಮ್ಮ ಮೇಲೆ ಬರುವ ಅಪವಾಧ ತಪ್ಪಿಸಿಕೊಳ್ಳಲು ನಾನು ಕೂಡ ನನ್ನ ಚಿಕ್ಕಪ್ಪನ ಜೊತೆ ಹೋಗಿ ತಂಗಿಯನ್ನು ಬಿಟ್ಟು ಬಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 19-08-2017 ರಂದು ನಾನು ಮತ್ತು ರುದ್ರೇಶಪ್ಪ ಮೋಟಾರ್ ಸೈಕಲ್ ನಲ್ಲಿ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ನನ್ನ ತಂಗಿಯ ಮನೆಗೆ ಬಂದಿರುತ್ತೇವೆ. ನನ್ನ ತಂಗಿ ವಾಸಿಸುತ್ತಿದ್ದ ಕೋಣೆಗೆ ಬರಲು ಮನೆಯ ಹೊರಗಡೆಯಿಂದ ಹಾಗೂ ಮನೆಯ ಒಳಗಡೆಯಿಂದ ಮೆಟ್ಟಿಲುಗಳು ಇವೆ ಎಂದರೆ ಸರಿ. ದಿಃ 19-08-2017 ರಂದು ಬೆಳಿಗ್ಗೆ ನಾನು ಮತ್ತು ನನ್ನ ದೊಡ್ಡಪ್ಪನ ಮಗ ರುದ್ರೇಶ ಸೇರಿಕೊಂಡು ನನ್ನ ತಂಗಿಯ ಮನೆಗೆ ಹೋಗಿ ಅಲ್ಲಿ 1 ಮತ್ತು 2 ನೇ ಆರೋಪಿತರು ಹೊಲಕ್ಕೆ ಹೋಗಿರುವುದನ್ನು, 3 ನೇ ಆರೋಪಿಯು ಬೆಂಗಳೂರಿಗೆ ತನ್ನ ಮಗಳ ಬಾಣಂತನಕ್ಕೆ ಹೋಗಿರುವುದನ್ನು, ಮನೆಯಲ್ಲಿ ಅಜ್ಜಿ ಮಾತ್ರ ಇರುವುದನ್ನು ಗಮನಿಸಿ ನನ್ನ ತಂಗಿ ಕುಸುಮಳ ಜೊತೆ ಜಗಳವಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ರುದ್ರೇಶ ನನ್ನ ತಂಗಿಯ ಜೊತೆ ಜಗಳವಾಡಿ ಆಕೆಯನ್ನು ಕೊಲೆ ಮಾಡಿ, ನಂತರ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತೋರಿಸುವ ರೀತಿಯಲ್ಲಿ ಆಕೆಯನ್ನು ವಾಲ್ಟೂಬಿನ ಹ್ಯಾಂಡಲ್ ಗೆ ನೇತು ಹಾಕಿದ್ದೇವೆ ಎಂದರೆ ಸರಿಯಲ್ಲ. ನಂತರ ಸದರಿ ಕೋಣೆಯ ಒಳಗಡೆಯ

ಇಂಟರ್ ಲಾಕ್ ಕೀಯನ್ನು ತೆಗೆದುಕೊಂಡು ಹೊರಗಡೆಯಿಂದ ಬಾಗಿಲು ಹಾಕಿ ಲಾಕ್ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಅಜ್ಜಿಗೆ ಮೆಟ್ಟಿಲು ಹತ್ತಲು ಆಗುತ್ತಿರಲಿಲ್ಲ ಮತ್ತು ಆಕೆಗೆ ಕಿವಿಯೂ ಕೂಡ ಕೇಳಿಸುತ್ತಿರಲಿಲ್ಲ ಎಂದರೆ ನನಗೆ ತಿಳಿದಿರುವುದಿಲ್ಲ.

ನಾನು ಮತ್ತು ರುದ್ರೇಶ ಮೃತಳ ಕೋಣೆಗೆ ಬಂದಾಗ ಆ ದಿನ ಮಧ್ಯಾಹ್ನ 1-00 ಗಂಟೆಯಾಗಿತ್ತು. ನಂತರ ಅರ್ಧ ಗಂಟೆಯಲ್ಲಿ ಪೋಲೀಸರು ಅಲ್ಲಿಗೆ ಬಂದಿರುತ್ತಾರೆ. ನಾವು ಪೋಲೀಸರಿಗೆ ಅಲ್ಲಿಗೆ ಬರಲು ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ಬಂದ ಪೋಲೀಸರ ಹುದ್ದೆ ಯಾವುದು ಎಂದು ನನಗೆ ತಿಳಿದಿರುವುದಿಲ್ಲ, ಆದರೆ ಸಮವಸ್ತ್ರದಲ್ಲಿ ಇದ್ದರು. ಆ ಸಮಯದಲ್ಲಿ ಅಲ್ಲಿಗೆ ಬಂದ ಪೋಲೀಸರು ಪಂಚನಾಮೆ ಬರೆದಿದ್ದಾರೋ ಇಲ್ಲವೋ ನನಗೆ ತಿಳಿದಿಲ್ಲ, ಯಾಕೆಂದರೆ ನಾನು ವಾಪಾಸು ಮೆಳ್ಳೆಕಟ್ಟೆಯ ನನ್ನ ಮನೆಗೆ ಬಂದಿರುತ್ತೇನೆ. ನಾವು ಅಲ್ಲಿ ಇದ್ದಾಗ ಬಂದ ಪೋಲೀಸರು ಶವದ ಪೋಟೋ ತೆಗೆದಿದ್ದಾರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಆ ಸಮಯದಲ್ಲಿ ನನ್ನ ತಂದೆಗೆ ಹುಷಾರಿಲ್ಲದ ಕಾರಣ ನಾನು ವಾಪಾಸು ಮನೆಗೆ ಬಂದಿದ್ದೆ ಎಂದು ನುಡಿದಿರುತ್ತಾರೆ.

ನನ್ನ ದೊಡ್ಡಪ್ಪನ ಮಗ ರುದ್ರೇಶ ಆ ದಿನ ನನ್ನ ಜೊತೆ ನನ್ನ ತಂಗಿಯ ಮನೆಗೆ ಹೋದ ಬಳಿಕ ಆಕೆಯ ಅಂತ್ಯ ಸಂಸ್ಕಾರದವರೆಗೆ ನನ್ನ ಜೊತೆಯಲ್ಲಿಯೇ ಇದ್ದ ಎಂಬ ಪ್ರಶ್ನೆಗೆ ಸಾಕ್ಷಿಯು ಜೊತೆಗೆ ಇರಲಿಲ್ಲ, ಆತ ಆತನ ಮನೆಗೆ ಹೋಗಿ ನಂತರ ಅಂತ್ಯ ಸಂಸ್ಕಾರದ ಸಮಯದಲ್ಲಿ ಬಂದಿದ್ದ ಎಂದು ನುಡಿದಿರುತ್ತಾರೆ. ಸದರಿ ದಿನ ನಾವು ಅಲ್ಲಿ ಇದ್ದಾಗ ಬಂದ ಪೋಲೀಸರು ನನಗಾಗಲಿ ಹಾಗೂ ರುದ್ರೇಶನಿಗಾಗಲಿ ವಿಚಾರಿಸಿದ್ದು ಇರುವುದಿಲ್ಲ.

ನನಗೆ ಪೋಲೀಸರು ಯಾವ ದಿನದಂದು ಆರೋಪಿತರ ಮನೆಯಲ್ಲಿ ಪಂಚನಾಮೆ ಬರೆದಿದ್ದಾರೆ ಎಂದು ತಿಳಿದಿರುತ್ತದೆ. ಆ ರೀತಿ ಪಂಚನಾಮೆಯನ್ನು ದಿಃ 20-08-2017 ರಂದು ಬರೆಯಲಾಗಿದ್ದು, ಆದರೆ ನನಗೆ ಸಮಯ ನೆನಪಿರುವುದಿಲ್ಲ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆದರೆ ರುದ್ರೇಶನ ಸಹಿ ಪಡೆದಿರುವುದಿಲ್ಲ, ಯಾಕೆಂದರೆ ಆತ ಆ ದಿನ ಬಂದಿರಲಿಲ್ಲ. ನಾನು ಮತ್ತು ರುದ್ರೇಶ ದಿಃ 19-08-2017 ರಂದು ನನ್ನ ತಂಗಿಯ ಶವ ನೋಡಲು ಜೊತೆಯಾಗಿ ಬೈಕಿನಲ್ಲಿ ಹೋಗಿದ್ದೆವು ಎನ್ನುವ ವಿಚಾರ ಪೋಲೀಸರಿಗೆ ವಿಚಾರಣೆ ಸಮಯದಲ್ಲಿ ಹೇಳಿರುವುದಿಲ್ಲ. ದಿಃ 19-08-2017 ರಂದು ನಾನು ಮತ್ತು ರುದ್ರೇಶ ಸೇರಿ ನನ್ನ ತಂಗಿಯನ್ನು ಕೊಲೆ ಮಾಡಿದ್ದು, ನಂತರ ಅದರ ಹಿಂದಿನ ದಿನ ನನ್ನ ತಂಗಿ ನಮಗೆ ಆರೋಪಿತರು ತೊಂದರೆ ನೀಡುತ್ತಿದ್ದಾರೆ ಎಂದು ದೂರವಾಣಿ ಮಾಡಿದ್ದಳು ಎಂದು ಸುಳ್ಳು ಕತೆಯನ್ನು ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ದಿಃ 18-08-2017 ರಂದು ನನ್ನ ತಂಗಿ ದೂರವಾಣಿಯ ಮುಖಾಂತರ ನಮ್ಮ ಜೊತೆ ಮಾತನಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಆಕೆ ಮಾಡಿದ ದೂರವಾಣಿಯ ನಂಬರನ್ನು ಪೋಲೀಸರಿಗೆ ಹೇಳಿರುವುದಿಲ್ಲ, ಅದೇ ರೀತಿ ಪೋಲೀಸರು ಕೂಡ ನಮ್ಮ ಬಳಿ ಸದರಿ ನಂಬರನ್ನು ಕೇಳಿರುವುದಿಲ್ಲ.

ದಿಃ 19-08-2017 ರಂದು ನನ್ನ ತಂಗಿಯ ಶವವನ್ನು ಚಿಗಟೇರಿ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋದಾಗ ನಾನು ಕೂಡ ಹೋಗಿದ್ದೆ. ಆಕೆಯ ಶವವನ್ನು ಆ ದಿನ ರಾತ್ರಿ 12-00 ಗಂಟೆಯವರೆಗೆ ಶವಾಗಾರದಲ್ಲಿ ನೋಡಿ ನಂತರ ವಾಪಾಸು ನನ್ನ ಮನೆಗೆ ಬಂದಿರುತ್ತೇನೆ. ಆಕೆಯ ಶವ ಪಂಚನಾಮೆ ಮಾಡುವಾಗ ನಾನು

ಹಾಜರಿದ್ದೆ. ಸದರಿ ಶವ ತನಿಖೆ ಮಾಡುವಾಗ ತನಿಖಾಧಿಕಾರಿಗೆ ನಾನು ಹೇಳಿಕೆ ನೀಡಿರುತ್ತೇನೆ. ಆದರೆ ಶವ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೋ ಇಲ್ಲವೋ ನನಗೆ ನೆನಪಿರುವುದಿಲ್ಲ.

ನನ್ನ ತಂಗಿಯ ಮದುವೆ ಸಮಯದಲ್ಲಿ ಆರೋಪಿತರು 30 ತೊಲ ಬಂಗಾರ, ಎರಡೂವರೆ ಲಕ್ಷ ರೂಪಾಯಿ ಹಣ, ಒಂದು ಬೈಕು ಹಾಗೂ ಖರ್ಚು ಹಾಕಿ ಮದುವೆ ಮಾಡಿಕೊಡಬೇಕು ಎಂದು ಮಾತುಕತೆಯಾಡಿದ್ದರು ಎಂದು ನಾನು ಸುಳ್ಳು ಕತೆ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ಪ್ರಕಾರ ಅವುಗಳನ್ನು ನೀಡಿ ಮದುವೆ ಮಾಡಿಕೊಟ್ಟಿದ್ದಲ್ಲದೇ, ಮದುವೆಯ ಸಮಯದಲ್ಲಿ ಬಾಂಡೆ ಸಾಮಾನು, ಗಾಡ್ರೇಜ್ ಕೊಟ್ಟು ಮದುವೆ ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನೀಡಿದ ಸುಳ್ಳು ದೂರಿನ ಆಧಾರದ ಮೇಲಿಂದ ತನಿಖಾಧಿಕಾರಿಯು ಆರೋಪಿತರ ಮನೆಯಲ್ಲಿ ಇದ್ದ ಅವರಿಗೆ ಸಂಬಂಧಿಸಿದ ಬಾಂಡೆ ಸಾಮಾನುಗಳನ್ನು, ಬಟ್ಟೆಗಳನ್ನು ಹಾಗೂಾ ಗಾಡ್ರೇಜ್ ಅನ್ನು ವಶಕ್ಕೆ ಪಡೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂಗಿಯನ್ನು ಸದಾ ಕಾಲ ಆರೋಪಿತರು ಚೆನ್ನಾಗಿಯೇ ನೋಡಿಕೊಂಡಿದ್ದು, ಆಕೆಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2016 ಡಿಸೆಂಬರ್ ನಲ್ಲಿ ಹೆಚ್ಚಿನ ವರದಕ್ಷಿಣೆಗಾಗಿ ಆರೋಪಿತರು ನನ್ನ ತಂಗಿಗೆ ಹೊಡೆ ಬಡೆ ಮಾಡಿ ಹಿಂಸೆಯನ್ನು ನೀಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸದರಿ ವಿಷಯಗಳನ್ನು ನನ್ನ ತಂಗಿಯು ದೂರವಾಣಿ ಮುಖಾಂತರ ತಿಳಿಸುತ್ತಿದ್ದಳು ಎಂದು ನುಡಿದಿದ್ದು, ಸದರಿ ದೂರವಾಣಿಯ ನಂಬರ್ ನನಗೆ ತಿಳಿದಿರುವುದಿಲ್ಲ. ಅದೇ ರೀತಿ 2017 ರ ಫೆಬ್ರವರಿ ತಿಂಗಳಿನಲ್ಲಿ ಪುನಃ ಆರೋಪಿತರು ನನ್ನ ತಂಗಿಗೆ ಹೊಡೆದು ನಮ್ಮ ಮನೆಗೆ ಕಳುಹಿಸಿದ್ದಾರೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಆರೋಪಿತರಿಗೆ ಬುದ್ದಿವಾದವನ್ನು ಹೇಳಿ ನನ್ನ ತಂಗಿಯನ್ನು ಅವರ ಮನೆಯಲ್ಲಿ ಬಿಟ್ಟು ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಇನ್ನೊಮ್ಮೆ ಈ ರೀತಿ ನಡೆದುಕೊಳ್ಳುವುದಿಲ್ಲ ಎಂದು ಹೇಳಿದ್ದರು ಎಂದು ಈ ಪ್ರಕರಣಕ್ಕಾಗಿ ಸೃಷ್ಟಿಸಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 2017 ಜೂನ್ ತಿಂಗಳಿನಲ್ಲಿಯೂ ಕೂಡ ನನ್ನ ತಂಗಿಗೆ ಹೊಡೆ ಬಡೆ ಮಾಡಿ ಮನೆಗೆ ಬರಬೇಡ ಎಂದು ಹೇಳಿ ಕಳುಹಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 18-08-2017 ರಂದು ರಾತ್ರಿ 10-30 ಯಿಂದ 11-00 ಗಂಟೆ ಸಮಯದಲ್ಲಿ ನನ್ನ ತಂಗಿ 10-00 ಗಂಟೆಗೆ ದೂರವಾಣಿ ಮಾಡಿ ತಿಳಿಸಿದ ವಿಷಯವನ್ನು ನನ್ನ ದೊಡ್ಡಪ್ಪನಿಗೆ ತಿಳಿಸಿರುತ್ತೇನೆ. ಮರುದಿನ ನಾನು ಮತ್ತು ರುದ್ರೇಶ ನನ್ನ ತಂಗಿಯ ಮನೆಗೆ ಹೋದಾಗ ಅಲ್ಲಿ ಸುಮಾರು 25 ರಿಂದ 30 ಜನರು ಸೇರಿದ್ದರು. ನನ್ನ ತಂಗಿಯ ಶವವನ್ನು ನೋಡಿದಾಗ ಆಕೆಯ ಕುತ್ತಿಗೆಯ ಮೇಲೆ ಹಿಚುಕಿದ ಗಾಯ, ಎಡಗಾಲಿನ ಮೇಲೆ ತರಚಿದ ಗಾಯ ಇತ್ತು ಎಂದು ಪೋಲೀಸರೊಂದಿಗೆ ಸೇರಿಕೊಂಡು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ವರದಕ್ಷಿಣೆಗಾಗಿ ಹೊಡೆ ಬಡೆ ಮಾಡಿದ ಕಾರಣ ನನ್ನ ತಂಗಿ ತೀರಿಕೊಂಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಮ್ಮ ದುಷ್ಕೃತ್ಯದಿಂದ ನನ್ನ ತಂಗಿಯನ್ನು ಕೊಲೆ ಮಾಡಿ ಆ ಅಪವಾಧವನ್ನು ಆರೋಪಿತರ

ಮೇಲೆ ಹೇರಿದ್ದೇವೆ ಎಂದರೆ ಸರಿಯಲ್ಲ.  ನನ್ನ ತಂಗಿಯ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.10.04 10:56:38 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.